ಮುಳುಗಡೆಯಾಗುತ್ತವೆ. ಆಗ ಸಾವಿರಾರು ಜನ ಅವರು ವಾಸ ಮಾಡತಕ್ಕ ಊರನ್ನು ಬಿಟ್ಟು ಬೇರೆ ಕಡೆಗೆ ಹೊ.ಗಿ ಜೀವನ ಮಾಡಬೇಕಾಗುತ್ತದೆ. ಮತ್ತು ಇದರಿಂದ ಅವರು ಜೀವನಕ್ಕೆ ಅವಲಂಬಿಸಿದಂತಹ ಭೂಮಿ ಮತ್ತು ಬೇರೆ ಬೇರೆ ಉದ್ಯೋಗ ಮಾಡತಕ್ಕಂತಹವರು, ಉದ್ಯೋಗವನ್ನು ಕಳೆದುಕೊಂಡಿರತಕ್ಕಂತಹ ಅನೇಕ ಉದಾಹರಣೆಗಳು ನಮ್ಮ ಮುಂದೆ ಇವೆ. ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರವನ್ನು ಕೊಡತಕ್ಕಂತಹದ್ದು ಕಾನೂನಿನಲ್ಲಿದೆ. ಆದರೆ ಬರೀ ಹಣದಿಂದ ಅವರಿಗೆ ಸರಿಯಾದ ಪರಿಹಾರ ಸಿಕ್ಕುವುದಿಲ್ಲ. ಅವನಿಗೆ ಇರತಕ್ಕಂತಹದ್ದು ಆಧಾರ ಭೂಮಿ. ಆ ದೃಷ್ಟಿಯಿಂದ ಭೂಮಿಯನ್ನು ಕಳೆದುಕೊಂಡವರಿಗೆ ಭೂಮಿಯನ್ನು ಕೊಡತಕ್ಕಂತಹದ್ದು, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕಸಂಬುದಾರರಿಗೆ ಪುನಃ ಉದ್ಯೋಗಕ್ಕೆ ಅವಕಾಶ ಮಾಡಿಕೊಡತಕ್ಕಂತಹದ್ದು. ಕೃಷಿ ಕಾರ್ಮಿಕರಿಗೆ, ಬಡವರಿಗೆ ಬೇರೆ, ಬೇರೆ ಯೋಜನೆಗಳಿಂದ ಸಹಾಯ ಮಾಡತಕ್ಕಂತಹದ್ದು ಈ ತಿದ್ದುಪಡಿ ಮಸೂದೆಯ ಮೂಲ ಉದ್ದೇಶವಾಗಿದೆ. ನಮ್ಮೆಲ್ಲರ ಅನುಭವದ ಪ್ರಕಾರ ಮುಳುಗಡೆಯಾದಂತಹ ಪ್ರದೇಶದ ಜನರಿಗೆ ಎಲ್ಲಿ ವಸತಿಯನ್ನು ಮಾಡಿಕೊಟ್ಟಿದ್ದೇವೆ, ಅಲ್ಲಿ ಅವರಿಗೆ ತಮ್ಮ ಮೂಲ ಗ್ರಾಮದಲ್ಲಿದ್ದಂತಹ ಎಲ್ಲ ಸೌಲಭ್ಯಗಳು ದೊರೆತಿಲ್ಲ. ಜೊತೆಗೆ ಅನೇಕರು ನಿರ್ಗತಿಕರಾಗಿದ್ದಾರೆ. ಇದನ್ನು ತಡೆಯೆಂಪ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದೆ ೀವೆ. ಈ ಮಸೂದೆಯಲ್ಲಿ ಮುಖ್ಯವಾಗಿ ಭೂಮಿಯನ್ನು ಕಳೆದುಕೊಂಡವರಿಗೆ ಎಲ್ಲಿ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆಯೋ ಅಲ್ಲಿ ಭೂಮಿಯನ್ನು ಇವರಿಗೆ ಕೊಡುವ ಹಾಗೆ ಅನುಕೂಲ ಮಾಡಿಕೊಡುವಂತಹದ್ದು. ಸರ್ಕಾರವೇ ಅದನ್ನು ಅಕ್ವೈರ್ ಮಾಡಿ ಯಾರು ಭೂಮಿಯನ್ನು ಕಳೆದುಕೊಂಡಿರುತ್ತಾರೆ, ಅವರಿಗೆ ಭೂಮಿಯನ್ನು ಕೊಡುವಂತಹ ಅವಕಾಶ ಇದರಲ್ಲಿದೆ. ಇದುವರೆವಿಗೂ ಆ ಅವಕಾಶ ಇರಲಿಲ್ಲ. ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರಾವರಿಯನ್ನು ಒದಗಿಸಿಕೊಟ್ಟಾಗ ಮುಳುಗಡೆಯಾದ ಪ್ರದೇಶದ ಜನರಿಗೆ ನಾವು ತೋರಿಸಬೇಕಾದ ಅನುಕಂಪ, ಮಾನವೀಯತೆಯನ್ನು ತೋರಿಸುವ ಸಲುವಾಗಿ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ. ಇದರಲ್ಲಿ ಮುಖ್ಯವಾಗಿ ಯಾವ ರೀತಿ ಜೋನ್ ಮಾಡಬೇಕು. ಮುಳುಗಡೆಯಾದ ಮೇಲೆ ಭೂಮಿಯನ್ನು ಯಾವ ರೀತಿ ವಿಲೇವಾರಿ ಮಾಡತಕ್ಕಂತಹದ್ದು, ಯಾವ ರೀತಿ ಅಕ್ವೈರ್ ಮಾಡತಕ್ಕಂತಹದ್ದು, ಎಷ್ಟರಮಟ್ಟಿಗೆ ಭೂಮಿಯನ್ನು ಕೊಡಬೇಕು, ಎಂಬುದನ್ನು ಇದರಲ್ಲಿ ಆಳವಡಿಸಿದ್ದೇವೆ. ಜೊತೆಗೆ ಮನೆಗಳಿಗಾಗಿ ಸೈಟುಗಳನ್ನು ಕೊಡತಕ್ಕಂತಹ ಎಲ್ಲ ವಿವರಗಳೂ ಇದರಲ್ಲಿ ಇವೆ. ಇದರಲ್ಲಿ ವಿಶೇಷವಾದುದೇನೆಂದರೆ, ಡೈರೆಕ್ಟರ್ ಆಫ್ ರೀಸೆಟ್ಲ್‌ಮೆಂಟ್ ಎಂಬುದಾಗಿ ಒಬ್ಬರು ಅಧಿಕಾರಿ ಇರುತ್ತಾರೆ. ಆ ಡೈರೆಕ್ಟರ್‌ರಿಗೆ ಎಲ್ಲ ಅಧಿಕಾರಗಳೂ ಇವೆ.

"Restriction on transfer, sub-division or partition of land benefitted zone."

ಅದೂ ಇಲ್ಲಿ ಇದೆ. ಎಲ್ಲಿ ಭೂಮಿ ಸಿಕ್ಕುತ್ತದೆ ಅದನ್ನು ಯಾವ ರೀತಿ ವಿಲೇವಾರಿ ಮಾಡಬೇಕಾಗುತ್ತದೆಂಬುದನ್ನೂ ಕೂಡ ತೀರ್ಮಾನ ಮಾಡುವಂತಹ ಅಧಿಕಾರ ಅವರಿಗೆ ಇದೆ. ಇದೇ ರೀತಿ:

"Assessment of extent of land from which persons are likely to be displaced and census of displaced persons"

ಇದರ ಬಗ್ಗೆ ಅಂಶಗಳನ್ನು ಕಲೆಹಾಕಿ ಯಾವ ರೀತಿ ಅವರಿಗೆ ಸೌಲಭ್ಯವನ್ನು ಒದಗಿಸಿಕೊಡಬೇಕೆಂಬುದರ ಬಗ್ಗೆ ವ್ಯವಸ್ಥೆ ಮಾಡಿದ್ದೇವೆ. ಜೊತೆಗೆ ಈ ಕಸುಬುದಾರರಿಗೆ ಮತ್ತು ಭೂ ಹೀನರಿಗೆ, ಅವರ ವಿಚಾರದಲ್ಲಿ ಕ್ರಮಗಳನ್ನು ತಯಾರು ಮಾಡಿ ಅವಶ್ಯಕ ಬರತಕ್ಕ ಹಣಕಾಸಿನ ಪರಿಸ್ಥಿತಿ ಇನ್ನಿತರೆ ಬೇರೆ ಸೌಲಭ್ಯಗಳನ್ನು ಕೊಟ್ಟು ಚಿಕ್ಕ ಚಿಕ್ಕ ಉದ್ದಿಮೆಗಳನ್ನು ಮಾಡುವುದಕ್ಕೆ, ಗ್ರಾಮೀಣ ಉದ್ಯೋಗ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದರಲ್ಲಿ ಯಾರಿಗಾದರೂ ತೊಂದರೆಯಾದರೆ, ಅದರ ಬಗ್ಗೆ ಅಪೀಲು ಮಾಡುವ ಅವಕಾಶವನ್ನೂ ಕೂಡ ಮಾಡಿಕೊಟ್ಟಿದ್ದೇವೆ. ಇದು ಒಂದು ಉತ್ತಮವಾದ ಮಸೂದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲೂ ಮುಳುಗಡೆಯಾದಂತಹ ಪ್ರದೇಶದ ಜನರಿಗೆ ಈ ರೀತಿಯಾಗಿ ಸಂಪೂರ್ಣವಾಗಿ ಸಹಾಯ ಮಾಡತಕ್ಕ ಕಾನೂನು ಈಗ ಇರಲಿಲ್ಲ. ಆ ಒಂದು ಮಸೂದೆಯನ್ನು ಇವೊತ್ತು ತಮ್ಮ ಮುಂದೆ ಮುಂಡಿಸಿದ್ದೇನೆ. ಇದನ್ನು ಬಹುಮತದಿಂದ ಪಾಸ್ ಮಾಡಿ ಕೊಡಬೇಕೆಂದು ತಮ್ಮ ಮೂಲಕ ಈ ಸಭೆಯನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಯಡಿಯೂರಪ್ಪನವರು ವೆಲ್‌ನಲ್ಲಿ ಕುಳಿದ್ದಾರೆ, ವಿರೋಧ ಪಕ್ಷದ ಸದಸ್ಯರೆಲ್ಲರ ಕುರ್ಚಿಗಳು ಖಾಲಿ ಇವೆ.

ಅಧ್ಯಕ್ಷರು.—ಯಡಿಯೂರಪ್ಪನವರೇ ತಾವು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಸಿ. ಬೈರೇಗೌಡ.—ಯಾವತ್ತೂ ಇಂತಹ ಒಂದು ಪರಿಸ್ಥಿತಿ ಇರಲಿಲ್ಲ. ನಾನು ಸಹ ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ತಾವು ತಮ್ಮ ಸದನದ ಸ್ಥಾನಕ್ಕೆ ಹೋಗಿ ಸಭೆಯ ಕಾರ್ಯಕಲಾಪದಲ್ಲಿ ಭಾಗವಹಿಸಬೇಕು ಎಂದು.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ; ೧೯೮೭ನೇ ಇಸವಿ ಕರ್ನಾಟಕ ಯೋಜನೆಯಿಂದ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು.—"ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸರಿಸಲ್ಪಟ್ಟವು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ; "ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೮೭ನೇ ಇಸವಿಯ ಕರ್ನಾಟಕ ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : "೧೯೮೭ನೇ ಇಸವಿಯ ಕರ್ನಾಟಕ ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ ಪುನರ್ವ್ಯವಸ್ಥೆಯ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು

೨) ೧೯೮೮ನೇ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಶಾಸನ ಸಭಾ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೮ನೇ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು